

ತೆಲುಗು ಮೂಲ: **ಕನುಪರ್ತಿ ವರಲಕ್ಷ್ಮಮ್ಮ**

ಕನ್ನಡಕ್ಕೆ: **ಸ.ರಘುನಾಥ**

ಕಲೆ: ಸಂತೋಷ್ ಸಸಿಹಿತ್ಲು





## 1

ಎತ್ತ ನೋಡಿದರೂ ಸುಕುಮಾರತೆ, ನಾಗರಿಕತೆಯ ದ್ಯೋತಕವಾಗಿತ್ತು ಗೋಪಾಲ ರಾಯನಲ್ಲಿ. ಸಣ್ಣನೆಯ ಅಂಚಿನ ಧೋತರಗಳು, ಮೃದುವಾದ ರೇಷಿಮೆ ಅಂಗಿಗಳು, ಹಾವಿನ ಪೊರೆಯಂತೆ ಮಿಣಮಿಣಿಸುವ ಹೆಗಲ ವಸ್ತ್ರಗಳನ್ನು ಬಿಟ್ಟರೆ ಅವನು ಬೇರೊಂದು ವಸ್ತ್ರವನ್ನೇ ಬಳಸಿ ಅರಿಯ. ಸದಾ ಬೈತಲೆ ಕೆದರದ ಕ್ರಾಪು, ಪಾಲೀಷು ಮಾಸದ ಬೂಡ್ಸುಗಳು, ಕಪ್ಪನೆಯ ಫ್ರೇಮಿನ ದುಂಡನೆಯ ಕನ್ನಡಕ, ರಿಸ್ಟ್ ವಾಚು ಉಳ್ಳ ತಾನು ಜನಿಸಿದ ಉನ್ನತ ಕುಟುಂಬಕ್ಕೆ, ತಾನು ಓದಿದ ಉನ್ನತ ವಿದ್ಯೆಗೆ ತಕ್ಕ ಆಕಾರವನ್ನು, ನಡವಳಿಕೆಯನ್ನು ಉಳ್ಳವನಾದ್ದ ಅವನು. ಇಷ್ಟು ನಾಗರಿಕತೆಯಿಂದ ಇರುವನೆಂದು ವರ್ಣಿಸುವುದರಿಂದ ಅವನು ಬರೀ ಷೋಕಿರಾಯನೆಂದು ಓದುಗರು ಭ್ರಮೆಗೆ ಒಳಗಾಗುವರೇನೊ? ವಿನಯ, ಕಾರುಣ್ಯಾದಿ ಗುಣವಿಶೇಷಗಳು ಅವನಿಗೆ ತೊಡಿಸಿದ ಒಡವೆಗಳು. ಸುಪ್ರಸನ್ನವಾದ ಅವನ ಮುಖವು ಸೌಮ್ಯತೆಗೆ ಹೊಂದುವುದು. ಮಾತೃದೇಶವೆಂದರೆ ಅವನಿಗೆ ಪರಮಭಕ್ತಿ. ಯಾವನಿಗೆ ದೇಶದ ಮೇಲೆ ಪ್ರೇಮವಿರುವುದೋ ಅವನು ದೇಶದ ಹಿತದ ಕಾರ್ಯಗಳಲ್ಲಿ ಪಾಲ್ಗೊಳ್ಳದೆಂತು ಇರಬಲ್ಲ? ಮಹಾತ್ಮ ಗಾಂಧೀಜಿಯು ಸತ್ಯಾಗ್ರಹವನ್ನು ಆರಂಭಿಸಿ ದೇಸೀಯರೆಲ್ಲರನ್ನು ಬನ್ನಿ ಬನ್ನಿರೆಂದು ಆಹ್ವಾನಿಸಿದಾಗ, ಆಹ್ವಾನವನ್ನು ಪಡೆದ ವಿದ್ಯಾರ್ಥಿ ಗಣದಲ್ಲಿ ಗೋಪಾಲರಾಯನು ಒಬ್ಬ. ಅವನು ವರಿಸಿದ ಕಾರ್ಯಕ್ಷೇತ್ರ ವಿದೇಶಿ ವಸ್ತ್ರ ಬಹಿಷ್ಕಾರ.

## 2

ರುಕ್ಮಿಣಿ ಹೆರಿಗೆ ನಿಮಿತ್ತ ಏಳು ಮಾಸಗಳ ಹಿಂದೆ ತವರಿಗೆ ಹೋದಳು. ಮಗ ಹುಟ್ಟಿದ. ಮಗು ಐದನೇ ತಿಂಗಳಿಗೆ ಬಿದ್ದಿತ್ತು. 'ಬಾಲಸಾರ' (ಮಗುವಿಗೆ ನಡೆಸುವ ಆಚಾರ) ಮುಗಿಸಿಕೊಂಡು ಹೆಂಡತಿ, ಮಗುವನ್ನು ಕರೆದುಕೊಂಡು ಹೋಗಬೇಕೆಂದು ಮಾವನವರು ಮೂರನೇ ತಿಂಗಳಲ್ಲಿಯು, ಐದನೆಯ ತಿಂಗಳಲ್ಲಿಯೂ ಗೋಪಾಲರಾಯನಿಗೆ ಪತ್ರ ಬರೆದಿದ್ದರು. ಸತ್ಯಾಗ್ರಹ ಚಳವಳಿಯಲ್ಲಿ ಮುಳುಗೇಳುತ್ತಿದ್ದ ಗೋಪಾಲನು ಆ ಪತ್ರಗಳಿಗೆ ಉತ್ತರಿಸಲಿಲ್ಲ. ಹೋಗಲಿಲ್ಲ. ರುಕ್ಮಿಣಿಗೆ ಅತ್ತೆಮನೆಗೆ ಹೋಗಬೇಕೆಂಬ ಕಾತರತೆ ಹೆಚ್ಚಿರುವುದನ್ನು ಗಮನಿಸಿ ತಾಯ್ತಂದೆ ಮಡಿಲು ತುಂಬಿ ರುಕ್ಮಿಣಿಯನ್ನು ಅತ್ತೆಮನೆಗೆ ಕಳುಹಿಸಿದರು. ತಾನು ಪುತ್ರವತಿಯಾದುದು, ಆ ಸಮಯದಲ್ಲಿಯೇ ತನ್ನ ಗಂಡ ಎಂ.ಎ ಪರೀಕ್ಷೆಯಲ್ಲಿ ಉತ್ತೀರ್ಣನಾದನೆಂಬ ಸುದ್ದಿ ಕೇಳಿದ್ದಳು. ಹೆಂಡಿರು ಗಂಡ ಮನಸ್ಸು ಒಂದಾದವರು. ಎಳೆಪ್ರಾಯದವರು. ಎಷ್ಟು ಮಾತುಗಳಿರುತ್ತವೆ? ತಮ್ಮ ಸುಖಮಯ ಸಂಭಾಷಣೆಗಳಿರುತ್ತವೆ? ಕನಿಷ್ಠ ಒಂದು ವಾರದ ಮಟ್ಟಿಗಾದರೂ ವಿರಾಮವಿರದೆ ಎಂಬುದು ರುಕ್ಮಿಣಿಯ ಮನದ ಅಭಿಪ್ರಾಯ. ರೈಲಿನಲ್ಲಿ ಪಯಣಿಸಿದಷ್ಟು ಸಮಯ ತಮ್ಮ ಪ್ರಸಂಗಗಳು ಹೇಗಿರುವುವೋ ಊಹಿಸಿ ಮುದಗೊಳ್ಳುತ್ತ, ತನುವಿಗಿಂತ ಮೊದಲು ಗಂಡನ ಸನ್ನಿಧಿಗೆ ಓಡುತ್ತಿದ್ದ ಮನಸ್ಸಿನ ಆತುರಕ್ಕೆ ನಗುತ್ತ, ಪತ್ರ ಬರೆಯದಿದ್ದುದಕ್ಕೆ ತುಂಬಾ ನಿಷ್ಠುರ ಮಾಡಬೇಕು, ಪರೀಕ್ಷೆ ಪಾಸಾದುದಕ್ಕೆ ಬಹಳ ಅಭಿನಂದಿಸಬೇಕು,